INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -2, July-Auguest, 2021, Page No,09-18
Peer Reviewed Journal, Referred Journal

# ಸಾಗರೋತ್ತರ ಸಂಪರ್ಕದಿಂದ ಉತ್ತರ ಕನ್ನಡ ಜಿಲ್ಲೆಯ ಮೇಲಾದ ಪ್ರಭಾವ ಮತ್ತು ಪರಿಣಾಮಗಳು.

**ಎಂ.ಲೋಕೇಶ್**[1]

ಗ್ರೀಕ್, ರೋಮನ್, ಅರೇಬಿಯನ್, ಪರ್ಷಿಯನ್ ಹಾಗೂ ಯುರೋಪಿಯನ್‌ರ ಪ್ರಭಾವ ಭಾರತದ ಚರಿತ್ರೆಯುದ್ದಕ್ಕೂ ನಿರಂತರವಾಗಿ ಬೀರಿರುತ್ತದೆ. ಅವು ಬೀರಿದ ಪರಿಣಾಮಗಳು ಅಳಿಸಲಾಗದೇ ಇರುವ ಮುದ್ರೆಯಾಗಿ ಇಂದಿಗೂ ಉಳಿದುಕೊಂಡು ಬಂದಿವೆ. ಇವು ಆಯಾ ಕಾಲಕ್ಕೆ ಭಾರತವನ್ನು ಹೊರಜಗತ್ತುಗಳೊಂದಿಗೆ ಮುಖಾಮುಖಿಯಾಗುವಂತೆ ಮಾಡಿದ್ದವು.ಈ ಮುಖಾಮುಖಿಯು ಸ್ಥಳೀಯ ರಾಜಕಾರಣ, ಆರ್ಥಿಕತೆ ಹಾಗೂ ಸಾಮಾಜಿಕ ರಚನೆಯ ಮೇಲೆ ತಮ್ಮದೇ ಆದಂತ ರೀತಿಯಲ್ಲಿ ಪ್ರಭಾವ ಬೀರಿದವು.ವಸಾಹತುಶಾಹಿಗಳ ಪ್ರವೇಶದೊಂದಿಗೆ ಸ್ಥಳೀಯತೆ ಉಳಿಯದೆ ಜಾಗತಿಕ ಮಾರುಕಟ್ಟೆ ಕೇಂದ್ರಿತ ಅರ್ಥ ವ್ಯವಸ್ಥೆ ಚುರುಕುಗೊಂಡಿತು.ಗ್ರೀಕೋ-ರೋಮನ್ ಸಂದರ್ಭದಲ್ಲಿ ಭಾರತದ ಮೇಲಿನ ನಿಯಂತ್ರಣ ವ್ಯಾಪಾರಕ್ಕಷ್ಟೇ ಸೀಮಿತಗೊಂಡಿದ್ದರೆ, ಅರೇಬಿಯನ್-ಪರ್ಷಿಯನ್ ಸಂದರ್ಭದಲ್ಲಿ ನಿಯಂತ್ರಣ ಇನ್ನಷ್ಟು ಬಿಗಿಗೊಂಡು ಪ್ರಭುತ್ವದ ಮೇಲೆ ನಿಯಂತ್ರಣ ಸಾಧಿಸುವಷ್ಟರ ಮಟ್ಟಿಗೆ ಬೆಳೆದಿತ್ತು.ಆದರೆ ಯುರೋಪಿಯನ್ನರ ಆಗಮನ ಭಾರತದ ರಾಜಕಾರಣ ಹಾಗೂ ಆರ್ಥಿಕತೆಯನ್ನು ಸಂಪೂರ್ಣವಾಗಿ ಬದಲಾಯಿಸಿ, ಬ್ರಿಟನ್ ಮಾದರಿಯ ಸರ್ಕಾರ ಹಾಗೂ ಆರ್ಥಿಕತೆ ಜಾರಿಗೊಳ್ಳುವಂತೆ ಮಾಡಿತು.ಬ್ರಿಟಿಷ್ ಸರ್ಕಾರ ವ್ಯಾಪಾರ-ವಾಣಿಜ್ಯ ಹಾಗೂ ಆಡಳಿತದ ಮೇಲಷ್ಟೇ ತಮ್ಮ ಹಿಡಿತವನ್ನು ಸಾಧಿಸಿದ್ದಲ್ಲದೇ, ಸ್ಥಳೀಯ ಸಂಸ್ಕೃತಿ, ಸಾಹಿತ್ಯ, ಚರಿತ್ರೆ ಹಾಗೂ ಭಾಷೆಗಳ ಮೇಲೂ ತನ್ನ ಮೇಲುಗೈ ಸಾಧಿಸಿರುವುದನ್ನು ಇಂದಿಗೂ ಗುರುತಿಸಬಹುದು.

**ಕೃಷಿ ಮತ್ತು ಕೈಗಾರಿಕಾ ವಲಯದ ಮೇಲಾದ ಪರಿಣಾಮಗಳು**

ಬಂಡವಾಳ ಕೇಂದ್ರಿತ ಅರ್ಥವ್ಯವಸ್ಥೆಯನ್ನು ಜಾರಿಗೊಳಿಸಿದ ಬ್ರಿಟಿಷ್ ಸರ್ಕಾರವೂ ಕೃಷಿಯನ್ನು ಲಾಭದಾಯಕ ಉದ್ದಿಮೆಯನ್ನಾಗಿ ಪರಿವರ್ತಿಸುವ ಪ್ರಯತ್ನ ಮಾಡಿ ಯಶಸ್ವಿಯಾಗಿರುತ್ತದೆ. ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ನೀಡಿ ಇಂಗ್ಲೆಂಡಿನ ಮಿಲ್‌ಗಳ ಕಚ್ಚಾಸಾಮಾಗ್ರಿಗಳ ಕೊರತೆಯನ್ನು ನೀಗಿಸಿಕೊಂಡರು. ಇಂಗ್ಲೆಂಡಿನ ಕೈಗಾರಿಕೀಕರಣಕ್ಕೆ ಭಾರತ ಕೃಷಿ ಪ್ರಧಾನವಾಗಿಯೇ ಉಳಿಯಬೇಕೆನ್ನುವುದು ಬ್ರಿಟಿಷ್ ಸರ್ಕಾರದ ಸ್ಪಷ್ಟ ಧೋರಣೆಯಾಗಿತ್ತು.ಆದರೆ, ಕೃಷಿ ಉದ್ದಿಮೆಯ

[1] .ಸಹಾಯಕ ಪ್ರಾಧ್ಯಾಪಕರು, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು.

ಸ್ವರೂಪದಲ್ಲಿರಬೇಕು ಹಾಗೂ ಯುರೋಪಿ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕವಾಗಿರಬೇಕು ಎನ್ನುವ ನೀತಿ ಸ್ಥಳೀಯ ಆರ್ಥಿಕತೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿತ್ತು. ವಾಣಿಜ್ಯ ಬೆಳೆಗಳು ರೈತರ ಜೀವನಾವಶ್ಯಕ ಬೆಳೆಗಳನ್ನು ಮೂಲೆಗುಂಪಾಗಿಸಿ, ಸಾವಿರಾರು ಎಕರೆ ಫಲವತ್ತಾದ ಪ್ರದೇಶವನ್ನು ಆವರಿಸಿಕೊಂಡವು.ಈ ಕಾರಣದಿಂದಾಗಿಯೇ ಹಲವು ಹತ್ತು ಪ್ರದೇಶಗಳು ಬ್ರಿಟಿಷ್ ಸರ್ಕಾರದ ವಿಶೇಷ ಆರ್ಥಿಕ ವಲಯಗಳಾಗಿ ರೂಪಗೊಂಡವು.ಅಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ನೀಡಲಾಯಿತು.ಇದರಿಂದಾಗಿ ಹೊಸ ಪ್ಲಾಂಟರ್‌ಗಳು, ಮಧ್ಯವರ್ತಿಗಳು ಹಾಗೂ ವರ್ತಕರು ವಿಶೇಷ ಸವಲತ್ತುಗಳೊಂದಿಗೆ ಬದಲಾದ ಅರ್ಥವ್ಯವಸ್ಥೆಯ ಮೇಲೆ ತಮ್ಮ ಗಟ್ಟಿಯಾದ ಹಿಡಿತವನ್ನು ಸಾಧಿಸಿದರು."[1]

**ನಗರೀಕರಣ**

ನಗರ ಅಥವಾ ನಗರ ಸಮುದಾಯವನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭದ ಸಂಗತಿಯಲ್ಲ. ಈ ಗ್ರಾಮ ಮತ್ತು ನಗರಗಳ ಪರಿಕಲ್ಪನೆಮತ್ತು ಅವುಗಳನ್ನು ನಿರ್ಧರಿಸುವ ಮಾನದಂಡಗಳು ಎಲ್ಲಾ ದೇಶಗಳಲ್ಲಿ ಒಂದೆ ತೆರನಾಗಿ ಇರುವುದಿಲ್ಲ. ನಗರ ಸಮಾಜವು ಗ್ರಾಮೀಣ ಮತ್ತು ಆದಿವಾಸಿ ಸಮುದಾಯಗಳಂತ ಭಿನ್ನ ಮತ್ತು ವೈವಿಧ್ಯಮಯವಾಗಿರುತ್ತವೆ. ವಿವಿದೋದ್ದೇಶಗಳನ್ನು ಹೊಂದಿದ ನಗರ ಸಮುದಾಯಗಳು ಇತಿಹಾಸದ ವಿವಿಧ ಕಾಲಘಟ್ಟಗಳನ್ನು ದಾಟಿ, ಏಳು ಬಿಳುಗಳನ್ನು ಕಂಡು, ಹಲವು ಹತ್ತು ರೀತಿಯ ವೃತ್ತಿಯಲ್ಲಿ ನೀರತ ಬಹುಜನರ ವಾಸದ ಸ್ಥಳಗಳೇನಗರಗಳಾಗಿ ರೂಪಾಂತರಗೊಂಡಿರುತ್ತವೆ.

ನಗರವು ನಾಗರಿಕರ ಜೀವನವನ್ನು ನಿಯಂತ್ರಿಸುವ ಉದ್ದೇಶದ ಶಕ್ತಿಗಳು ಮತ್ತು ಆಲೋಚನೆಗಳ ಅಭಿವ್ಯಕ್ತಿಯಾಗಿ, ಮಾನವ ಕಲೆ ಮತ್ತು ಪರಿಕಲ್ಪನೆಯ ಉದಾತ್ತ ಸ್ಮಾರಕವಾಗಿದೆ.ಅದರ ಮೂಲದಲ್ಲಿ ಅದನ್ನು ನಿರ್ಮಿಸಿದ ಜನರ ನಾಗರಿಕತೆಯ ವಿಕಾಸ ನಗರಗಳಲ್ಲಿ ವಿಕಸನಗೊಂಡಿದೆ ಮತ್ತು ಇನ್ನೂ ಮುಂದುವರೆದಿದೆ ಎಂದು ಹೇಳಬಹುದು.ನಾಗರಿಕತೆ ಹುಟ್ಟಿಕೊಂಡ ಪಾಶ್ಚಾತ್ಯ ಜಗತ್ತಿನಲ್ಲಿ ಇದು ವಿಶೇಷವಾಗಿ ಸತ್ಯವಾಗಿದೆ.ಭಾರತದಲ್ಲಿ ಸಹ ಒಂದು ಹಳ್ಳಿಯು ಅದರ ವಿಶಾಲ ಅರ್ಥದಲ್ಲಿ ನಾಗರಿಕತೆಯ ಕೇಂದ್ರವಾಗಿದೆ.ಪ್ರಾಚೀನ ಕಾಲದಲ್ಲಿ ಪಿತೃಪ್ರಧಾನ ಕುಟುಂಬಗಳು ಹೆಚ್ಚಾಗಿ ವಾಸಿಸುತ್ತಿದ್ದವು.ಕೃಷಿ ಪ್ರಧಾನ ಕುಟುಂಬಗಳೇ ಹಳ್ಳಿಯಾಗಿ ಬೆಳೆಯಿತು, ಮುಂದೆ ಹಳ್ಳಿಗಳು ಮಾರುಕಟ್ಟೆ ಕೇಂದ್ರವನ್ನು ಹೊಂದುವುದರ ಮೂಲಕ ಅವುಗಳೇ ನಗರಗಳಾಗಿ ಬೆಳೆದುಬಂದವು.ಅತ್ಯುತ್ತಮ ಪಟ್ಟಣ ಯೋಜನೆಗಳು ಸಂಪ್ರದಾಯಗಳಿಗೆ ಅನುಗುಣವಾಗಿ ಮತ್ತು ಸುಧಾರಿಸಿದವು.ಪಟ್ಟಣವಾಗಿ ಬೆಳೆಯಲು ಯಾವುದೇ ಸ್ಥಳದ ವ್ಯಾಪಾರಿ ಮೇಳವು, ಮಾರುಕಟ್ಟೆ ಅಥವಾ ದೇವಾಲಯದ ಅನುಕೂಲಗಳು, ಪ್ರಮುಖ ವ್ಯಾಪಾರ ಮಾರ್ಗಗಳು, ಕೋಟೆ, ವಿಶೇಷವಾಗಿ ನೀರು ಸುಲಭವಾಗಿ ಪ್ರವೇಶಿಸಿ ಮತ್ತು

ಸಾಗಿಸುವ ಸೌಲಭ್ಯಗಳನ್ನು ಹೊಂದಿರಬೇಕು (ಉದಾ., ಸಂಚರಿಸಬಹುದಾದ ನದಿಗಳು ಅಥವಾ ಸಮುದ್ರಗಳು).[2]

ಭಾರತದ ನಗರಗಳ ಇತಿಹಾಸದಲ್ಲಿ ಯುರೋಪಿಯನ್ನರ ಹಂತವು, ಮೋಘಲರ ಆಡಳಿತವು ಉನ್ನತ ಸ್ಥಿತಿಯಲ್ಲಿದ್ದಾಗ ನಿಧಾನಸ್ಪದವಾಗಿ ಪ್ರಾರಂಭವಾಗಿತ್ತು. ಪೋರ್ಚುಗೀಸರು ಭಾರತದಲ್ಲಿ ಹೊಸ ಬಂದರುಗಳನ್ನು ಸ್ತಾಪಿಸಿದ್ದರು.1510ರಲ್ಲಿ ಗೋವಾದಲ್ಲಿ ಪಣಜಿ ಮತ್ತು 1532ರಲ್ಲಿ ಬಾಂಬೆಯನ್ನು ಸ್ಥಾಪಿಸಿದರು.ಅನಂತರ ಪೋರ್ಚುಗೀಸರನ್ನು ಅನುಸರಿಸಿದ ಡಚ್ಚರು 1605ರಲ್ಲಿ ಮಚಲಿ ಪಟ್ಟಣವನ್ನು 1658ರಲ್ಲಿ ನಾಗಪಟ್ಟಣವನ್ನು, ಫ್ರೆಂಚರು 1673ರಲ್ಲಿ ಪಾಂಡಿಚೇರಿಯನ್ನು ಮತ್ತು 1690ರಲ್ಲಿ ಚಂದ್ರನಾಗೂರನ್ನು ಸ್ಥಾಪಿಸಿದರು.ಬ್ರಿಟಿಷರು ತಾವಾಗಿಯೇ 1639ರಲ್ಲಿ ಮದ್ರಾಸ್ ನಗರವನ್ನು ಮತ್ತು 1690ರಲ್ಲಿ ಕಲ್ಕತ್ತಾ ನಗರವನ್ನು ಸ್ಥಾಪಿಸಿದರು.ಈ ನಗರಗಳು ಯುರೋಪಿಯನ್ನರ ನೆಲೆಗಳ ನಿವಾಸ ಸ್ಥಳಗಳಾದವು.ಆಗಹಲವಾರು ಸಂಖ್ಯೆಯಲ್ಲಿ ಭಾರತೀಯ ಬಂದರು ಮತ್ತು ಒಳನಾಡು ನಗರಗಳು ವ್ಯಾಪಾರ ಕೇಂದ್ರಗಳಾಗಿ ಅಸ್ತಿತ್ವದಲ್ಲಿದ್ದವು.19ನೇ ಶತಮಾನದ ಪ್ರಾರಂಭದಲ್ಲಿ ಬ್ರಿಟಿಷರು ಭಾರತದಲ್ಲಿ ಸ್ಪಷ್ಟವಾದ ಹಿಡಿತ ಸ್ಥಾಪಿಸಿದ್ದರು ಮತ್ತೇ 1858ರ ಅವಧಿಯಲ್ಲಿ ಭಾರತವು ಬ್ರಿಟಿಷರ ಚಕ್ರಾಧಿಪತ್ಯದ ಅಡಿಯಲ್ಲಿ ಅವರ ರಾಜಕೀಯ ಆಡಳಿತಕ್ಕೆ ಒಳಪಟ್ಟಿತ್ತು.ಅದು ಅಲ್ಲಿಂದ 1947ರವರೆಗೂ ಮುಂದುವರೆದಿತ್ತು.1858ರಿಂದ 1947ರ ವರೆಗೆ ಇಡೀ ಭಾರತ ಉಪಖಂಡದ ಮೇಲೆ ಬ್ರಿಟಿಷರು ಪ್ರಶ್ನಾತೀತ ಅಧಿಕಾರವನ್ನು ಚಲಾಯಿಸಿದರು.ಇದು ಭಾರತದ ಇತಿಹಾಸದಲ್ಲಿ ಊಹಿಸಲೂ ಅಸಾಧ್ಯವಾದ ಘಟನೆಯಾಗಿತ್ತು.1800ರ ಅನಂತರ ನಗರೀಕರಣ ಪ್ರಕ್ರಿಯೇ ಭಾರತದ ಎಲ್ಲಾ ಭಾಗಗಳಲ್ಲಿ ಬ್ರಿಟಿಷರ ವಸಾಹತುಶಾಹಿ ಆರ್ಥಿಕ ನೀತಿಗಳು ಮತ್ತು ಸಾಮಾಜಿಕ ಮನೋಭಾವನೆಗಳಿಂದ ನಿಯಂತ್ರಿಸಲ್ಪಡುತ್ತಿತ್ತು.[3]

ಕರ್ನಾಟಕದ ಕರಾವಳಿ ಭಾಗದಲ್ಲಿರುವ ಉತ್ತರ ಕನ್ನಡ ಜಿಲ್ಲೆಯ ಕೆಲವು ಸ್ಥಳಗಳು 17 ಮತ್ತು 18ನೆಯ ಶತಮಾನದ ಅವಧಿಯಲ್ಲಿ ಯುರೋಪಿಯನ್ನರಾದ ಪೊರ್ಚುಗೀಸರು ಮತ್ತು ಬ್ರಿಟಿಷರ ಆಳ್ವಿಕೆಯ ಪರಿಣಾಮದ ಫಲವಾಗಿ ನಗರಗಳಾಗಿ ಬೆಳೆದವು.ಸ್ಥಳಿಯ ಮತ್ತು ವಿದೇಶಿ ವ್ಯಾಪಾರದ ಸರಕುಗಳ ಆಯಾತ ಮತ್ತು ನಿರ್ಯಾತದ ಕೇಂದ್ರ ಸ್ಥಳಗಳಾದ ಇಲ್ಲಿನ ಬಂದರು ಸ್ಥಳಗಳು ನಗರೀಕರಣ ಪ್ರಕ್ರೀಯೆಗೆ ಒಳಗಾದವು.ನಗರೀಕರಣ ಪ್ರಕೀಯೆಗೆ ಒಳಗಾದ ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಸ್ಥಳಗಳ ವಿವರ ಈ ಮುಂದಿನಂತೆ ದಾಖಲೀಕರಣಗೊಳಸಲಾಗಿದೆ.

**ಅಂಜದೀವ ದ್ವೀಪ**

ಕಾರವಾರದ ಆಗ್ನೇಯಕ್ಕೆ 5 ಮೈಲು ಅಂತರ ಸಮುದ್ರದೊಳಗೆ ಇರುವ ದ್ವೀಪವೇ ಅಂಜದೀವ ದ್ವೀಪವಾಗಿದೆ. ಆದ್ಯದ್ವೀಪ, ಆಜ್ಯದ್ವೀಪ, ಅಂಚೆ(ಪಂಚ)ದ್ವೀಪ, ಅಂಜನೀ ದ್ವೀಪ ಎಂಬ ಬೇರೆ ಬೇರೆ ಹೆಸರುಗಳಿಂದ ಈ ದ್ವೀಪವನ್ನು ಕರೆಯಲಾಗುತ್ತಿತ್ತು.ಇದು 1 ಮೈಲು ಉದ್ದ ಮತ್ತು 900 ಪೂಟ

ಅಗಲವಿದೆ.ಇಲ್ಲಿ ತೆಂಗು ಮತ್ತು ಹಲಸಿನ ಮರಗಳಿವೆ. ದ್ವೀಪದ ಮಧ್ಯಭಾಗದಲ್ಲಿ ಸಿಹಿನೀರಿನ ಕೊಳವಿದೆ.ಕ್ರಿ.ಶ ಆರಂಭಕಾಲದ ಟಾಲೆಮಿಯ ಭೂಗೋಳ ಗ್ರಂಥದಲ್ಲಿ ಮತ್ತು ಪೆರಿಪ್ಲಸ್ ಆಫ್ ಎರಿತ್ರೀಯನ್ ಸೀ ಗ್ರಂಥದಲ್ಲಿ ಈ ದ್ವೀಪದ ಉಲ್ಲೇಖಗಳಿವೆ. 1342ರಲ್ಲಿ ಈ ದ್ವೀಪಕ್ಕೆ ಬೇಟಿ ನೀಡಿದ ಆಫ್ರಿಕಾದ ಇಬನ್ ಬತೂತನೆಂಬ ಯಾತ್ರಿಕ ಅಲ್ಲಿ ಒಂದು ದೇವಾಲಯವನ್ನು ನೋಡಿರುವುದಾಗಿ ತನ್ನ ವರದಿಯಲ್ಲಿ ತಿಳಿಸಿದ್ದಾನೆ. ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಈ ದ್ವೀಪವು ಅವರ ವಶದಲ್ಲಿತ್ತು. ಆಗ ಅರಬ್ಬದಿಂದ ಬರುತ್ತಿದ್ದ ವ್ಯಾಪಾರಸ್ಥರು ಈ ದ್ವೀಪದಲ್ಲಿ ಉಳಿದುಕೊಳ್ಳುತ್ತಿದ್ದರು.ಅವರು ಅಲ್ಲಿನ ಸ್ಥಳಿಯರನ್ನುಬಹಳ ಪಿಡಿಸಿದ್ದರಿಂದ ಅನಂತರ ಆ ದ್ವೀಪ ಹಾಳು ಬಿದ್ದಿತು.ಮುಂದೆ 15ನೆಯ ಶತಮಾನದಲ್ಲಿ ಪೋರ್ಚುಗೀಸರು ವಾಸ್ಕೋಡಿಗಾಮಾ ಕಲ್ಕತ್ತಾದಿಂದ ಯೂರೋಪಕ್ಕೆ ತಿರುಗಿ ಹೋಗುವಾಗ ಈ ದ್ವೀಪದಲ್ಲಿ ಉಳಿದುಕೊಂಡಿದ್ದನು.ಆ ನಂತರ ದ್ವೀಪ ಪೋರ್ಚುಗೀಸರು ಭಾರತವನ್ನು ಬಿಟ್ಟು ಹೋಗುವವರೆಗೂ ಅವರ ವಶದಲ್ಲಿಯೇ ಉಳಿಯಿತು.ವಸಾಹತು ಕಾಲದಲ್ಲಿ ಇಲ್ಲಿ ಪೋರ್ತುಗೀಸರು ನೆಲೆಸಿದ್ದರು ಅವರು ಕ್ರಿಶ್ಚಿಯನ್ನರಾಗಿದ್ದರು.ಸ್ಥಳಿಯ ಜನರು ಮೀನು ಹಿಡಿದು ಬಧುಕುತ್ತಿದ್ದರು.ಅರಬ್ಬರಿಂದ ಮತ್ತು ಗ್ರೀಸದಿಂದ ಬರುತ್ತಿದ್ದ ವ್ಯಾಪಾರಿ ಹಡಗುಗಳು ಕೆಲವುಕಾಲ ಇಲ್ಲಿ ನಿಲ್ಲುತ್ತಿದ್ದವು.ಪೋರ್ಚುಗೀಸರು ತಮ್ಮ ರಕ್ಷಣೆ ಮತ್ತು ವ್ಯಾಪಾರದ ಉದ್ದೇಶಕ್ಕೆ ಇಲ್ಲಿ ಒಂದು ಕೋಟೆಯನ್ನು ಕಟ್ಟಿದ್ದಾರೆ.[4]

**ಅಂಕೋಲಾ**

ಅಂಕೋಲಾವು ಕಾರವಾರದ ಆಗ್ನೇಯಕ್ಕೆ 15 ಮೈಲು ಅಂತರದಲ್ಲಿದೆ.ವಸಾಹತು ಕಾಲದಲ್ಲಿ ಇಲ್ಲಿ ತಾಲೂಕು ಕಛೇರಿ, ಟಪಾಲ್ ಕಛೇರಿ, ಫೌಜದಾರ ಕಛೇರಿ, ಸುಂಕದ (ಕಷ್ಟಮ್) ಕಛೇರಿ, ಆಂಗ್ಲ ಶಾಲೆಗಳು, ಮುಶಾಫರೀ ಬಂಗಲೆ, 60 ಅಂಗಡಿಗಳಿರುವ ಬಜಾರಗಳು ಬೆಳೆದಿದ್ದರಿಂದ ಇದು ಕರಾವಳಿಯ ಒಂದು ನಗರವಾಗಿ ರೂಪುಗೊಂಡಿತು. ಇಲ್ಲಿನ ಬಜಾರದಲ್ಲಿ ಅಡಿಕೆ, ತೆಂಗು, ತಂಬಾಕ, ವಸ್ತ್ರಗಳು ಮುಂತಾದ ಗೃಹಬಳಕೆ ಸರಕುಗಳ ವ್ಯಾಪಾರ ನಡೆಯುತ್ತಿತ್ತು.1881ರ ಅವಧಿಯಲ್ಲಿ ಒಟ್ಟು 8 ವರ್ಷಕ್ಕೆ ಇಲ್ಲಿನ ಸಮುದ್ರ ಮಾರ್ಗದ ಮೂಲಕ 53140 ರೂಪಾಯಿ ಬೆಲೆಬಾಳುವ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿತ್ತು ಮತ್ತು 64960 ರೂಪಾಯಿ ಬೆಲೆಬಾಳುವ ಸರಕುಗಳನ್ನು ರಫ್ತು ಮಾಡಲಾಗಿತ್ತು.ಈ ಊರ ಸುತ್ತ 600 ಯಾರ್ಡ ಸುತ್ತಳತೆ ಹೊಂದಿರುವ ಕೋಟೆಯೊಂದನ್ನು ಸ್ವಾದಿಯ ಅರಸನೊಬ್ಬ ಕಟ್ಟಿಸಿದ್ದನು.ಇದರಲ್ಲಿ ರುದ್ರೇಶ್ವರ ದೇವಸ್ಥಾನವಿತ್ತು.ಕ್ರಿ.ಶ 1675ರಲ್ಲಿ ವಿಜಯಪೂರದ ಅರಸರ ವಶದಲ್ಲಿದ್ದ ಅಂಕೋಲೆಯ ಮೇಲೆ ಶಿವಾಜಿಯು ದಾಳಿಮಾಡಿ ಲೂಟಿ ಮಾಡಿದನು.ಇನ್ನೂ ಕ್ರಿ.ಶ 1763ರಲ್ಲಿ ಹೈದರ ಅಂಕೋಲೆಯನ್ನು ವಶಪಡಿಸಿಕೊಂಡಾಗ ಇಲ್ಲಿ 7000 ಜನ ಕ್ರಿಶ್ಚಿಯನ್ನರು ವಾಸವಾಗಿದ್ದರು.ಟಿಪ್ಪು ಇಲ್ಲಿಯ ಚರ್ಚುಗಳನ್ನು ನಾಶಪಡಿಸಿ ಹಲವು ಕ್ರಿಶ್ಚಿಯನ್ ಜನರನ್ನು ಬಂಧಿಸಿ ಶ್ರೀರಂಗಪಟ್ಟನಕ್ಕೆ ಕರೆದೊಯ್ದಿದ್ದನು.[5]

**ಬೇಲಿಕೇರಿ**

ಅಂಕೋಲೆಯ ಉತ್ತರಕ್ಕೆ ನಾಲ್ಕು ಮೈಲು ಅಂತರದಲ್ಲಿ ಈ ಬೇಲಿಕೇರಿ ಇದೆ.ಇದು ಬಂದರು ಸ್ಥಳವಾಗಿದೆ.ವಸಾಹತುಕಾಲದಲ್ಲಿ ಸುಂಕದ (ಕಷ್ಟಮ್) ಕಚೇರಿ ಇಲ್ಲಿತ್ತು. ಹಾಗಾಗಿ ಇಲ್ಲಿನ ಸಮುದ್ರ ದಂಡೆಯ ಆಲದ ಬನದೊಳಗೆ ಸರಕಾರೀ ಬಂಗಲೆಗಳಿದ್ದವು.

**ಭಟ್ಕಳ**

ಹೊನ್ನಾವರದ ದಕ್ಷಿಣಕ್ಕೆ 25 ಮೈಲು ಅಂತರದಲ್ಲಿರುವ ಭಟ್ಕಳವು ವಸಾಹತು ಕಾಲದಲ್ಲಿ ಅಂದಿನ ಮುಂಬಯಿ ಪ್ರಾಂತ್ಯದ ದಕ್ಷಿಣಕ್ಕಿರುವ ಕಡೆಯ ಬಂದರು ನಗರವಾಗಿತ್ತು.ವಸಾಹತು ಕಾಲದ ಪೂರ್ವದಲ್ಲಿಯೂ ಇದು ಒಂದು ನಗರ ಸ್ವರೂಪವನ್ನೇ ಹೊಂದಿತ್ತು.8ನೆಯ ಶತಮಾನದ ನಂತರ ಅರಬ್, ಇರಾಣಿ ಜನರ ವಂಶಜರು ವ್ಯಾಪಾರಕ್ಕಾಗಿ ಬಂದು ಇಲ್ಲಿಯೇ ನೆಲೆನಿಂತರು.ಅವರನ್ನು ಸ್ಥಳಿಯವಾಗಿ "ನವಾಯತರೆಂದು" ಕರೆಯುತ್ತಾರೆ.ಇಲ್ಲಿ 4 ಮಸೀದಿಗಳನ್ನು ಕಟ್ಟಲಾಯಿತು.ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಭಟ್ಕಳವು ಅವರ ವಶದಲ್ಲಿತ್ತು, ಅವರ ಒಬ್ಬ ಪ್ರಾಂತ್ಯಾಧಿಕಾರಿ ಇಲ್ಲಿ ಇರುತ್ತಿದ್ದನು.ಅವರ ಪ್ರಮುಖ ವಿದೇಶಿ ವ್ಯಾಪಾರದ ಬಂದರು ಇದಾಗಿತ್ತು. ವಿಜಯನಗರದ ಅರಸರ ಅನಂತರ ಭಟ್ಕಳದ ಮೇಲೆ ಕೆಳದಿಯ ನಾಯಕರು ತಮ್ಮ ಹಿಡಿತವನ್ನು ಸಾದಿಸಿದರು. ಆನಂತರ ಪೋರ್ಚುಗೀಸರು ವ್ಯಾಪಾರದ ಮತ್ತು ಬಂದರು ನೆಲೆಯಾದ ಈ ಭಟ್ಕಳದ ಕಡೆಗೆ ತಮ್ಮ ಗಮನಹರಿಸಲಾರಂಭಿಸಿದರು.ಆದರೆಗೇರುಸೊಪ್ಪೆಯ ಸಾಳ್ವರು ಇಲ್ಲಿ ಪ್ರಬಲರಾದರು.15 ಮತ್ತು 16ನೆಯ ಶತಮಾನದಲ್ಲಿ ಸ್ಥಳಿಯ ಅರಸರಾದ ಗೇರುಸೊಪ್ಪೆ ಮತ್ತು ಹಾಡುವಳ್ಳಿ ಸಾಳ್ವರ ಆಳ್ವಿಕೆಯ ಕಾಲದಲ್ಲಿ ಈ ನಗರದಲ್ಲಿ 13 ಜೈನರ ಜಿನಾಲಯಗಳನ್ನು ಕಟ್ಟಲಾಗಿತ್ತು.ಅನಂತರ ಭಟ್ಕಳವು ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ ದಾಳಿಗಳಿಗೂ ಒಳಗಾಗಿ 1670ರ ಹೊತ್ತಿಗೆ ಬ್ರಿಟಿಷರ ಕೈವಶವಾಯಿತು.ಇಲ್ಲಿ ಬ್ರಿಟಿಷರು ತಮ್ಮ ವ್ಯಾಪಾರದ ಅಂಗಡಿಯನ್ನು ಆರಂಭಿಸಿದರು.ಆ ಬ್ರಿಟಿಷರ ವ್ಯಾಪಾರದ ಅಂಗಡಿಯವರ "ಬುಲ್‌ಡಾಗ್" ಎಂಬ ಉಗ್ರವಾದ ನಾಯಿ ಊರೊಳಗೆ ಬಂದು ಸ್ಥಳಿಯ ದೇವಾಲಯ ಒಂದರ ಮುಂದೆ ನಿಂತಿದ್ದ ಒಂದು ಆಕಳನ್ನು ಕೊಂದಿತು.ಇದರಿಂದ ರೊಚ್ಚಿಗೆದ್ದ ಸ್ಥಳಿಯ ಜನರು ಆಂಗ್ಲ ವರ್ತಕರ ಅಂಗಡಿಯನ್ನು ಹಾಳು ಮಾಡಿ, 18 ಜನ ಆಂಗ್ಲರನ್ನು ಕೊಂದರು.[6]ಆ ಘಟನೆಯಲ್ಲಿ ಸತ್ತ 3 ಯರೋಪಿಯನ್ನರ ಘೋರಿಗಳನ್ನು ಈಗಲೂ ನಾವು ಭಟ್ಕಳ ನಗರದಲ್ಲಿ ಕಾಣಬಹುದು.

**ಬಿಳಗಿ**

ಘಟ್ಟದ ಮೇಲ್ಭಾಗದಲ್ಲಿ ಸಿದ್ದಾಪುರದಿಂದ ಪಶ್ಚಿಮಕ್ಕೆ 5 ಮೈಲು ಅಂತರದಲ್ಲಿ ಬಿಳಗಿ ನಗರವಿದೆ.14ರಿಂದ 16ನೆಯ ಶತಮಾನದಲ್ಲಿ ಇದು ಬಿಳಗಿ ಅರಸರ ರಾಜಧಾನಿ ಸ್ಥಳವಾಗಿತ್ತು.ಇಲ್ಲಿ ರತ್ನತ್ರಯ ಜಿನಾಲಯ, ವಿರೂಪಾಕ್ಷ ಮತ್ತು ಹನುಮಂತನ ದೇವಾಲಯಗಳಿವೆ.

**ಬಿಂಘಿ**

ಕಾರವಾರದಿಂದ ದಕ್ಷಿಣಕ್ಕೆ 3 ಮೈಲು ಅಂತರದಲ್ಲಿರುವ ಈ ಬಿಂಘಿ ಎಂಬ ತೀರದ ಸ್ಥಳವು ದೊಡ್ಡ ದೊಡ್ಡ ಹಡಗುಗಳು ನಿಲ್ಲಲು ಅನುಕೂಲವಾದ ಬಂದರು ಸ್ಥಳವಾಗಿತ್ತು.ಇರಾಣಿ ಮತ್ತು ಅರಬ್ ದೇಶದ ಹಡಗುಗಳು ಈ ಬಂದರಕ್ಕೆ ಬರುತ್ತಿದ್ದವು.ವಸಾಹತು ಕಾಲದಲ್ಲಿ ಇದು ಒಂದು ಸುಂಕದ (ಕಷ್ಟಮ್) ಕಛೇರಿಯನ್ನು ಹೊಂದಿತ್ತು.

**ಚಂದಾವರ**

ಕುಮಟೆಯ ಆಗ್ನೇಯಕ್ಕೆ 5 ಮೈಲು ಅಂತರದಲ್ಲಿರುವ ಚಂದಾವರವು 12 ಮತ್ತು 13ನೆಯ ಶತಮಾನದಲ್ಲಿ ಚಂದಾವರ ಕಾದಂಬರ ಅಳ್ವಿಕೆಯ ಕೇಂದ್ರ ಸ್ಥಾನವಾಗಿತ್ತು.ಇಲ್ಲಿ ಅವರ ಕಾಲದಲ್ಲಿ ಕೋಟೆಯೊಂದು ಕಟ್ಟಲ್ಪಟ್ಟಿತು.ಆ ಕೋಟೆಯ ಅವಶೇಷಗಳನ್ನು ಇಂದಿಗೂ ನಾವು ಸ್ಥಳಯ ಪಂಚಾಯತ ಹತ್ತಿರದ ದಿನ್ನೆಯಲ್ಲಿ ಕಾಣಬಹುದು.ಕೋಟೆ ಪ್ರದೇಶದ ಒಳಗೆ ಒಂದು ಜಿನಾಲಯವಿದ್ದುದರ ಅವಶೇಷಗಳು ಕಂಡುಬರುತ್ತವೆ.ಅನಂತರ ಮಧ್ಯಕಾಲದಲ್ಲಿ ಈ ಊರು ವಿಜಯಪೂರದ ಅರಸರ ಸರದಾರನಾದ ಶರಿಫ್ ಉಲ್ ಮುಲ್ಕನ ಅಧಿಕಾರಕ್ಕೆ ಒಳಪಟ್ಟಿತ್ತು.ಅವನ ಅಧಿಕಾರಾವಧಿಯಲ್ಲಿ ಈ ಊರು ಒಂದು ನಗರವಾಗಿ ಬೆಳೆಯಿತು.ಮುಂದೆ ಇಕ್ಕೇರಿಯ ವೆಂಕಟಪ್ಪನಾಯಕ ಚಂದಾವರವನ್ನು ಆಕ್ರಮಿಸಿದನು.ಕೆಳದಿಯರ ಅನಂತರ ಈ ಪ್ರದೇಶ ಪೋರ್ಚುಗೀಸರು ತಮ್ಮ ವಾಸದ ನೆಲೆಗಳನ್ನು ಇಲ್ಲಿ ಸ್ಥಾಪಿಸಿಕೊಂಡು, ಅಲ್ಲಿ ರೋಮನ್ ಕ್ಯಾಥೊಲಿಕರು ತಮ್ಮ ಪ್ರಾರ್ಥನೆಗಾಗಿ ಒಂದು ಚರ್ಚನ್ನು ಕೂಡಾ ಕಟ್ಟಿಕೊಂಡರು.

**ಚಂಡಿಯ**

ಕಾರವಾರದ ದಕ್ಷಿಣಕ್ಕೆ 5 ಮೈಲು ದೂರದಲ್ಲಿರುವ ಒಂದು ಗ್ರಾಮ ಈ ಚಂಡಿಯವಾಗಿದೆ.ವಸಾಹತುಕಾಲದಲ್ಲಿ ಸಮುದ್ರ ಮಾರ್ಗದ ವ್ಯಾಪಾರವು ಇಲ್ಲಿ ಚೆನ್ನಾಗಿ ನಡೆಯುತ್ತಿತ್ತು.

**ಗಂಗಾವಳಿ**

ಅಂಕೋಲೆಯ ಉತ್ತರಕ್ಕೆ 5 ಮೈಲು ಅಂತರದಲ್ಲಿ ಈ ಗಂಗಾವಳಿ ತೀರವಿದೆ.ವಸಾಹತು ಕಾಲದಲ್ಲಿ ಇಲ್ಲಿ ಸರಕಾರೀ ಸುಂಕದ (ಕಷ್ಟಮ್) ಕಛೇರಿ ಇತ್ತು.ಗಂಗಾವಳಿಯ ದಂಡೆಯ ಮೇಲೆ ಗಂಗೆಯ ದೇವಾಲಯವಿತ್ತು.

**ಗೇರುಸೊಪ್ಪೆ**

ಹೊನ್ನಾವರದ ಪೂರ್ವಕ್ಕೆ 16 ಮೈಲು ಅಂತರದಲ್ಲಿ ಶರಾವತಿ ನದಿ ದಂಡೆಯ ಮೇಲೆ ಈ ಗ್ರಾಮವಿದೆ. ಇಲ್ಲಿ "ನಗರ ಬಸ್ತಿಕೇರಿ" ಎಂಬ ಸ್ಥಳವು 13 ರಿಂದ 15 ನೆಯ ಶತಮಾನದಲ್ಲಿ ಆಳ್ವಿಕೆಯನ್ನು ಮಾಡಿದ ಗೇರುಸೊಪ್ಪೆ ಸಾಳ್ವರ ಕೇಂದ್ರ ಸ್ಥಳವಾಗಿತ್ತು.ಆ ಕಾಲದಲ್ಲಿ ಪಟ್ಟಣವಾಗಿದ್ದ ಇಲ್ಲಿ ಒಂದು ಲಕ್ಷ ಮನೆಗಳಿದ್ದವಂತೆ.ಕೆಳದಿಯ ಅರಸರ ದಾಳಿಯ ಅನಂತರ ಈ ನಗರವು ಪಾಳು ಬಿದ್ದಿತು.ಕೆಲವು

(ಜಂಬೂರೀ ಇಟ್ಟಿಗೆ) ಜಂಬಿಟ್ಟಿಗೆ ಮತ್ತು ಮರದಿಂದ ನಿರ್ಮಾಣವಾದ ದೇವಾಲಯಗಳು ನಾಶವಾಗಿ ದೇವಾಲಯದ ಅಧಿಷ್ಠಾನ ಹಾಗೂ ಜಿನಬಿಂಬಗಳ ಅವಶೇಷಗಳು ಮಾತ್ರ ಉಳಿದವು.ಅಲ್ಲಿನ ಚತುರ್ಮುಖ ಬಸದಿಯು ಇಂದಿಗೂ ಸುಸ್ಥಿತಿಯಲ್ಲಿ ಉಳಿದುಕೊಂಡು ಬಂದಿದೆ.

**ಗೋಕರ್ಣ**

ಅಂಕೋಲಾ ಮತ್ತು ಕುಮಟಾ ಪಟ್ಟಣಗಳ ನಡುವೆ ಗೋಕರ್ಣವು ಇಂದಿನ ರಾಷ್ಟ್ರೀಯ ಹೆದ್ದಾರಿಯಿಂದ 8 ಕಿ.ಮೀ ದೂರದಲ್ಲಿದೆ. ಇಲ್ಲಿರುವ ಶ್ರೀ ಮಹಾಬಲೇಶ್ವರ ದೇವಸ್ಥಾನವು ದೇಶದ ಪ್ರಮುಖ ಪುಣ್ಯಕ್ಷೇತ್ರಗಳಲ್ಲೊಂದು.ವಸಾಹತುಕಾಲದಲ್ಲಿ ಈ ಮಹಾಬಳೇಶ್ವರ ಲಿಂಗವು ನೆಲದ ಮೇಲೆ ಎರಡು ಇಂಚು ಎತ್ತರವಿತ್ತಂತೆ.ಈ ದೇವಸ್ಥಾನದಿಂದ ಕೇವಲ 100 ಮೀ.ಅಂತರದಲ್ಲಿ ಗೋಕರ್ಣ ಕಡಲತೀವಿದೆ.ಇದೊಂದು ವಿಶಾಲ ಮರಳಿನ ತೀರವಾಗಿದೆ. ಉತ್ತರಕ್ಕೆ ಸುಮಾರು 4 ಕಿ.ಮೀ ಉದ್ದದವರೆಗೆ ಈ ತೀರದಲ್ಲಿ ಚಿಕ್ಕಪುಟ್ಟ ಹಳ್ಳಿಗಳಿವೆ. ದಕ್ಷಿಣಕ್ಕೆ ಒಂದು ದೊಡ್ಡ ಗುಡ್ಡವಿದೆ. ಈ ಗುಡ್ಡದ ದಾರಿಯಲ್ಲಿ ಧುಮುಕುವ ನೀರಿದೆ, ಅದನ್ನೇ 'ರಾಮತೀರ್ಥ' ವೆಂದು ಕರೆಯುವರು.ಅಲ್ಲಿಂದ ಮುಂದೆ ಸಾಗಿದಾಗ ಸಮುದ್ರದ ಕಡೆಯಿಂದ ಗುಡ್ಡವು ಸೀಳಿದಂತೆ ಕಂಡು, ಎರಡು ಸೀಳುಗಳ ನಡುವೆ ನೀರು ತೊಟ್ಟಿಕ್ಕುವುದು ಕಾಣಿಸುತ್ತದೆ.ಆ ತೊಟ್ಟಿಕ್ಕುವ ನೀರು ಸಂಜೆಯ ಸೂರ್ಯನ ಬೆಳಕಿನಲ್ಲಿ ದೂರದಿಂದ ನೋಡಿದರೆ ರಕ್ತದಂತೆ ಕಾಣುತ್ತದೆ.ಇದನ್ನು 'ಜಟಾಯು ತೀರ್ಥ' ಎಂದು ಕರೆಯುತ್ತಾರೆ. ಪುರಾಣದ ಕಥೆಯ ಪ್ರಕಾರ, ರಾವಣನು ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಅಪಹರಿಸಿಕೊಂಡು ಹೋಗುವಾಗ ಜಟಾಯು ಅವನನ್ನು ತಡೆಯಿತಂತೆ, ಆಗ ರಾವಣನು ತನ್ನ ಖಡ್ಗದಿಂದ ಜಟಾಯುವಿನ ರೆಕ್ಕೆಯನ್ನು ಕಡಿದನಂತೆ. ಇದರಿಂದ ಅದು ಅಲ್ಲಿ ಸುರಿಯುತ್ತಿದೆ ಎನ್ನುವುದು ಪ್ರತೀತಿ.ಅದರ ಗುಡ್ಡದ ಮೇಲೆ ಒಂದು ಸಮತಟ್ಟಾದ ವಿಶಾಲ ಕಲ್ಲುಭೂಮಿ ಇದ್ದು, ಅಲ್ಲಿ ಒಂದು ಪುಟ್ಟ ಗವಿ ಇದೆ. ಈ ಸ್ಥಳವನ್ನು 'ಗೋವಿನೊಟ್ಟೆ' ಎಂದು ಕರೆಯುವರು.[7]

'ಓಂ ಕಡಲ ತೀರ' ಈ ಗೋಕರ್ಣದ ಒಂದು ಆಕರ್ಷಣೆಯಾಗಿದೆ.ಸ್ಥಳಿಯ ಪುರಾಣ ಪ್ರತೀತಿಯಂತೆ ಶಿವನು ಆಕಳ ಕಿವಿಯಿಂದ ಹೊರಬಂದನಂತೆ, ಅದರ ಜೊತೆಗೆ ಉತ್ತರಕ್ಕೆ ಗಂಗಾವಳಿ ಮತ್ತು ದಕ್ಷಿಣಕ್ಕೆ ಅಘನಾಶಿನಿ ನದಿಗಳಿದ್ದು ಇವು ಹರಿಯುವ ದಾರೆಯಿಂದ ಇವುಗಳ ನಡುವಿನ ಭೂಪ್ರದೇಶ ಗುಡ್ಡದ ಮೇಲಿಂದ ಅಥವಾ ವೈಮಾನಿಕ ದೃಷ್ಟಿಯಲ್ಲಿ ನೋಡಲು ಆಕಳ ಕಿವಿಯಾಕಾರದಲ್ಲಿ ಕಂಡುಬರುತ್ತದೆ.ಈ ಕಾರಣಗಳಿಂದ ಇದನ್ನು ಓಂ ಕರಾವಳಿ ತೀರ ಎಂದು ಕರೆಯಲಾಗುತ್ತದೆ.ಕಿರು ಪಟ್ಟಣದಂತಿರುವ ಈ ಗೋಕರ್ಣದಲ್ಲಿ ವೈವಿಧ್ಯಮಯ ಹಲವು ಜಾತಿ, ಧರ್ಮಗಳ ಜನ ವಾಸವಾಗಿದ್ದಾರೆ.ಅವರಲ್ಲಿ ಹೆಚ್ಚಿನವರು ಕೃಷಿ, ಮೀನುಗಾರಿಕೆಯಲ್ಲಿ ತೊಡಗಿಕೊಂಡಿದ್ದರೆ, ಕೆಲವು ಬ್ರಾಹ್ಮಣರು ವೈದ್ಯಕೀಯ ವೃತ್ತಿಯಲ್ಲಿ ತೊಡಗಿದ್ದಾರೆ.ಯಕ್ಷಗಾನ, ಗುಮಟೆ ಪಾಂಗು, ಸುಗ್ಗಿ ಕುಣಿತ, ಬಂಡಿ ಹಬ್ಬ ಇವು ಸ್ಥಳೀಯರ ಸಾಂಸ್ಕೃತಿಕ ಚಟುವಟಿಕೆಗಳು.

ವಸಾಹತುಕಾಲದಲ್ಲಿ ಇಲ್ಲಿ ಪೋಲಿಸ್ ಚೌಕಿ, ಕನ್ನಡ ಶಾಲೆ, ಮುಶಾಫರೀ ಬಂಗಲೇ, ಮುನ್ಸಿಪಾಲಟಿಗಳು ಇದ್ದವು.ಈ ಊರಿನ ಬಜಾರು ದೊಡ್ಡದಾಗಿತ್ತು.1676ರಲ್ಲಿ ಫ್ರಾಯರ್ ಎಂಬ ಇಂಗ್ಲಿಷ ಪ್ರವಾಸಿಯು ಈ ಗೋಕರ್ಣದ ರಥೋತ್ಸವವನ್ನು ಕಣ್ಣಾರೆ ಕಂಡು ವರ್ಣಿಸಿದ್ದಾನೆ. 1801ರಲ್ಲಿ ಬುಕಾನನ್ ಈ ಗೋಕರ್ಣಕ್ಕೆ ಭೇಟಿ ನೀಡಿದ್ದನು.ಆತ ತನ್ನ ವಿವರದಲ್ಲಿ ತಿಳಿಸುವಂತೆ ಇಲ್ಲಿ 500 ಮನೆಗಳಿದ್ದವು. ಊರ ಸುತ್ತ ಬತ್ತದ ಗದ್ದೆಗಳು ಮತ್ತು ತೆಂಗಿನ ಬನಗಳಿದ್ದವು. ಇಲ್ಲಿ ಸ್ಥಳಿಯ ಸರಕುಗಳ ವ್ಯಾಪಾರ ನಡೆಯುತ್ತಿತ್ತು.[8]

**ಹಾಡುವಳ್ಳಿ**

ಭಟ್ಕಳದ ಈಶ್ಯಾನ್ಯಕ್ಕೆ 11 ಮೈಲು ಅಂತರದಲ್ಲಿರುವ ಹಾಡುವಳ್ಳಿಯು 13ರಿಂದ 15ನೆಯ ಶತಮಾನದ ಅವಧಿಯಲ್ಲಿ ಹಾಡುವಳ್ಳಿ ಸಾಳುವರ ಆಡಳಿತದ ಕೇಂದ್ರ ಸ್ಥಳವಾಗಿತ್ತು.ಇದನ್ನು ಸಂಗೀತಪುರವೆಂತಲೂ ಕರೆಯಲಾಗುತ್ತಿತ್ತು.ಇಲ್ಲಿ ಜೈನರ ಜಿನಾಲಯಗಳಿವೆ.

**ಹಳದೀಪುರ**

ಹೊನ್ನಾವರದಿಂದ ಉತ್ತರಕ್ಕೆ 5 ಮೈಲು ಅಂತರದಲ್ಲಿ ಈ ಹಳದೀಪುರವಿದೆ. ಹೈಗ ಬ್ರಾಹ್ಮಣರು ಇಲ್ಲಿ ನೆಲೆಸಿದ್ದಾರೆ. ವಸಾಹತುಕಾಲದಲ್ಲಿ ಇಲ್ಲಿ ಒಂದು ಆಂಗ್ಲೋವೆರ್ನಾಕ್ಯುಲರ ಶಾಲೆ ಇತ್ತು.1801ರ ವೆಳೆಗೆ ಈ ಊರಲ್ಲಿ 352 ಮನೆಗಳಿದ್ದವು.[9]

**ಹಳಿಯಾಳ**

ಘಟ್ಟದ ಮೆಲ್ಭಾಗದಲ್ಲಿ ಯಲ್ಲಾಪುರದಿಂದ ಉತ್ತರಕ್ಕೆ 25 ಮೈಲು ಅಂತರದಲ್ಲಿದೆ.ವಸಾಹತು ಕಾಲಾವಧಿಯಲ್ಲಿ ಇಲ್ಲಿ ಮಾಮಲೇಧಾರ ಕಛೇರಿ, ಫೌಜದಾರ ಕಛೇರಿ, ಟಪಾಲ ಕಛೇರಿ, ಆಸ್ಪತ್ರೆ, ಮುನ್ಸಿಪಾಲಟಿ, 3 ಶಾಳೆಗಳು ಇದ್ದವು.ಮುಖ್ಯವಾಗಿ ಇಲ್ಲಿ ಮರದ ದಿಮ್ಮಿ (ತೊಲೆ)ಗಳ ವ್ಯಾಪಾರ ಹೆಚ್ಚಾಗಿ ನಡೆಯುತ್ತಿತ್ತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕಟ್ಟಿಗೆ ವ್ಯಾಪಾರದ ಮುಖ್ಯ ಕೇಂದ್ರ ಇದಾಗಿತ್ತು.ಸರಕಾರಕ್ಕೆ ಆದಾಯ ತರುವ ಮುಖ್ಯ ಸ್ಥಳವಾಗಿದ್ದು, 1864 ರಲ್ಲಿ 3.688 ರೂಪಾಯಿ, 1870ರಲ್ಲಿ 5.071 ರೂಪಾಯಿ ಮತ್ತು 1881ರಲ್ಲಿ 5.527 ರೂಪಾಯಿಗಳ ಆದಾಯ ಸರಕಾರಕ್ಕೆ ತಲುಪಿತು.

**ಹೊನ್ನಾವರ**

ಕುಮಟೆಯ ದಕ್ಷಿಣಕ್ಕೆ 10 ಮೈಲು ಅಂತರದಲ್ಲಿರುವ ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಬಂದರು ನೆಲೆ ಈ ಹೊನ್ನಾವರವಾಗಿದೆ.ಕ್ರಿ.ಶ 247ರಲ್ಲಿ ಗ್ರೀಸ್ ದೇಶದ ಆರ್ಯನ್ನನೆಂಬುವನು ತನ್ನ ಪೆರಿಪ್ಲಸ್ ಕೃತಿಯಲ್ಲಿ ಹೊನ್ನಾವರವನ್ನು "ನಾವರ" ಎಂದು ಉಲ್ಲೇಖಿಸಿದ್ದಾನೆ. ಇದು ತಮಿಳ ದೇಶದ ಪ್ರಮುಖ ಬಂದರಾಗಿತ್ತು ಎಂದಿರುವನು.ಕ್ರಿ.ಶ 1342ರಲ್ಲಿ ಆಫ್ರಿಕಾದ ಯಾತ್ರಿಕ ಇಬನ್ ಬತೂತ ಹೊನ್ನಾವರವನ್ನು ಸಂದರ್ಶಿಸಿದ್ದನು.ಆತ ತಿಳಿಸುವಂತೆ "ಹೊನ್ನಾವರ ಬಂದರವು ಒಂದು ನದಿಯ (ಶರಾವತಿ) ದಂಡೆಯ ಮೇಲಿದೆ.ಈ ಊರಲ್ಲಿ ಅರಬ ಜನರು ಮುಖ್ಯವಾಗಿ ನೆಲೆಸಿದ್ದಾರೆ.ಇಲ್ಲಿ 23 ಗಂಡು ಮಕ್ಕಳ ಶಾಲೆಗಳು,

13 ಹೆಣ್ಣು ಮಕ್ಕಳ ಶಾಲೆಗಳಿದ್ದವು. ಇಲ್ಲಿನ ಮುಖ್ಯಾಧಿಕಾರಿ ಜಮಾಲ ಉದ್ದೀನ ಮಹಮ್ಮದನಾಗಿದ್ದು, ಆತ ವಿಜಯನಗರದ ಅರಸ ಹರಿಯಬ (ಹರಿಹರ)ನ ಆಳ್ವಿಕೆಯನ್ನು ಒಪ್ಪಿಕೊಂಡಿದ್ದನು. ಅವನ ಕೈಗೆಳಗೆ 6000 ಸೈನಿಕರ ದಂಡಿತ್ತು."1444ರಲ್ಲಿ ಇರಾಣದ ಅಬ್ದುಲ್ ರಜಾಕ್ ಎಂಬುವನು ಈ ಹೊನ್ನಾವರ ಬಂದರಿಗೆ ಬಂದು ಅಲ್ಲಿಂದ ವಿಜಯನಗರ ಸಾಮ್ರಾಜ್ಯವನ್ನು ಸಂದರ್ಶನ ಮಾಡಿದನು.1503ರಲ್ಲಿ ವಾಸ್ಕೋಡಗಾಮನ ಸೈನ್ಯವು ಹೊನ್ನಾವರ ಮೇಲೆ ದಾಳಿಮಾಡಿ ಆ ನಗರವನ್ನು ಹಾಳು ಮಾಡಿ, ಸುಟ್ಟು ಹಾಕಿದರು.ಅನಂತರ ಪೋರ್ಚುಗೀಸರು ಇಲ್ಲಿ ಒಂದು ವ್ಯಾಪಾರಿ ಅಂಗಡಿಯನ್ನು ತೆರೆದರು.ವಿಜಯನಗರವು ಹಾಳದ ಬಳಿಕ ಹೊನ್ನಾವರವು ಭಟ್ಕಳ ರಾಣಿಯ (ಚೇನ್ನಭೈರಾದೇವಿ) ವಶದಲ್ಲಿತ್ತು. ನಂತರ ಕೆಳದಿಯರ ವಶಕ್ಕೆ ಹೋಯಿತು.1623ರಲ್ಲಿ ಇಕ್ಕೇರಿಯ ವೆಂಕಟ ನಾಯಕನಿಗೂ ಮತ್ತು ಪೋರ್ತುಗೀಸರಿಗೂ ಹೊನ್ನಾವರ ಬಂದರಿನ ಸಲುವಾಗಿ ಒಪ್ಪಂದವಾಯಿತು.ಕ್ರಿ.ಶ 1751ರಲ್ಲಿ ಇಂಗ್ಲಿಷರು ಹೊನ್ನಾವರದಲ್ಲಿ ತಮ್ಮ ವ್ಯಾಪಾರಿ ಅಂಗಡಿಯನ್ನು ತೆರೆದರು.ಮುಂದೆ ಹೊನ್ನಾವರವು 1762ರಲ್ಲಿ ಹೈದರಾಲಿಯದಾಳಿಗೆ ಒಳಗಾಯಿತು.ಆತನ ಮಗ ಟಿಪ್ಪುವಿನ ಮರಣಾನಂತರ (1799) ಹೊನ್ನಾವರನು ಆಂಗ್ಲರ ಅಧಿಪತ್ಯಕ್ಕೆ ಸೇರಿತು.ಅಷ್ಟೊತ್ತಿಗಾಗಲೇ ಟಿಪ್ಪು ಈ ನಗರವನ್ನು ನಾಶ ಮಾಡಿದ್ದನು.ಆ ಕಾರಣದಿಂದ 1800ರಲ್ಲಿ ಇಲ್ಲಿ ಒಂದು ಮನೆಯು ಉಳಿದಿರಲಿಲ್ಲವಂತೆ.ಅನಂತರ ಆಂಗ್ಲರು ವ್ಯಾಪಾರದ ದೃಷ್ಟಿಯಲ್ಲಿ ಇಲ್ಲಿ ಜನವಸತಿಯನ್ನು ಬೆಳೆಸಿದರು.ಹಾಗಾಗಿ ಕ್ರಿ.ಶ 1860ರ ಹೊತ್ತಿಗೆ ಮತ್ತೆ ಇಲ್ಲಿ 12.000 ಮನೆಗಳಾದವು. ಸಮುದ್ರ ತೀರ ವ್ಯಾಪಾರದ ಕೇಂದ್ರವಾಗಿ ನಗರವು ಬೆಳೆಯಿತು.[10]

1881ರಲ್ಲಿ ಇದರ ಜನಸಂಖ್ಯೆ 5813 ಇತ್ತು.ಸಮುದ್ರ ತೀರಕ್ಕೆ ಹೊಂದಿಕೊಂಡಂತೆ ಶರಾವತಿ ನದಿ ತಟದಲ್ಲಿ ಈ ನಗರವಿದೆ.ಮಾವಿನ ಕುರ್ವೆ ಎಂಬ ನಡುಗಡ್ಡೆ ಇಲ್ಲಿದ್ದು ಅದರಲ್ಲಿ ಭತ್ತ ಗದ್ದೆಗಳು ಮತ್ತು ತೆಂಗಿನ ಬನಗಳಿವೆ. ಇಲ್ಲಿರುವ ಇನ್ನೊಂದು ನಡುಗಡ್ಡೆ ಅದುವೇ ಬಸವರಾಜದುರ್ಗ. ಇದರಲ್ಲಿಯೂ ಭತ್ತ ಗದ್ದೆಗಳು ಮತ್ತು ತೆಂಗಿನ ಬನಗಳಿವೆ. ಇದರ ದಕ್ಷಿಣದ ಅಂಚಿನಲ್ಲಿ ಬಿದನೂರಿನ ಸದಾಶಿವ ನಾಯಕನೆಂಬ (1648–1670) ಅರಸನಿಂದ ಕಟ್ಟಲ್ಪಟ್ಟ ಕೋಟೆಯೊಂದಿದೆ. ಅಲ್ಲಿ 8 ತೋಪುಗಳು ಮತ್ತು ಸಿಹಿ ನೀರಿನ ಕೊಳಗಳಿದ್ದವು.ಹೊನ್ನಾವರವು ಆಂಗ್ಲರ ಆಡಳಿತದಲ್ಲಿ ಕೆಲವು ಕಾಲ ಮದ್ರಾಸ ಇಲಾಖೆಗೆ ಸೆರೀತ್ತು, ಆಗ ಇಲ್ಲಿ ಸಬ್ ಕಲೆಕ್ಟರ್ ಕಛೇರಿ, ಜಡ್ಜ್ ಕಛೇರಿ, ದಂಡಿನ 2 ಕಂಪನಿಗಳು ಇದ್ದವು. 1860ರಲ್ಲಿ ಇದನ್ನು ಮುಂಬಯಿ ಪ್ರಾಂತ್ಯಕ್ಕೆ ಸೆರಿಸಲಾಯಿತು.ಆಗ ಈ ನಗರ ಬೆಳವಣಿಗೆ ಕುಂಟಿತವಾಯಿತು.ಆದರೂ ಮಾಮಲೇದಾರ ಫೌಜದಾರ ಕಚೇರಿ, ಮುನ್ಸಿಫ್ ಕಚೇರಿ, ಟಪಾಲ ಕಚೇರಿ, ಸುಂಕದ (ಕಷ್ಟಮ್) ಕಚೇರಿ, ಆಸ್ಪತ್ರೆ ಮತ್ತು ಇಂಗ್ಲಿಷ್ ಶಾಲೆಗಳು ಇಲ್ಲಿದ್ದವು.ಇಲ್ಲಿ ತಾಮ್ರದ ಪಾತ್ರೆಗಳು ಮತ್ತು ಶ್ರೀಗಂಧದ ಮರದ ದಿಮ್ಮಿಗಳಲ್ಲಿ ಕೆತ್ತನೆ ಮಾಡಿದ ಉತ್ಪನ್ನಗಳನ್ನು ತಯಾರಿಸಲಾಗುತ್ತಿತ್ತು.ಇಲ್ಲಿನ ಬಂದರಿನ ಮೂಲಕ ಸರಕುಗಳ ಆಮದು ಮತ್ತು ರಫಾಗುತ್ತದ್ದವು.1881 ರ ಅವಧಿಯ ಹಿಂದಿನ ಒಟ್ಟ 8

ವರ್ಷಗಳಲ್ಲಿ 5.63.280 ರೂಪಾಯಿ ಸರಕು ಆಮದಾಗಿತ್ತು. 5.51.990 ರೂಪಾಯಿಯ ಸರಕು ರಪ್ತಾಗಿತ್ತು.[11]

ಹೀಗೆ ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯು ಸ್ವಾತಂತ್ರ ಪೂರ್ವದಲ್ಲಿ ಸಾಗರವನ್ನು ದಾಟಿ ನಿಂತಿರುವ ವಿದೇಶಿಯರ ವ್ಯಾಪರ ಕೇಂದ್ರವಾಗಿತ್ತು ಮತ್ತೆ ಅದು ಇಲ್ಲಿನ ಜನವರ್ಗಗಳ ಮೇಲೆ ಮಾದರಿಯ ಪ್ರಭಾವವನ್ನು ಬೀರಿದೆ.ಮತ್ತೆ ಅದು ಇಂದಿಗೂ ಇಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

## ಪರಾಮರ್ಶನ ಗ್ರಂಥಗಳು


1. ಮೋಹನಕೃಷ್ಣ ರೈ.ಕೆ.,2010,ಕೆನರಾದ ವಿಭಜನೆ–ಹತ್ತಿ ರಾಜಕೀಯದ ವಿಶ್ಲೇಷಣೆ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ.ಹಂಪಿ, ಪು.4
2. Amita Ray, Villages Touns and Secular Buildings in Ancient India, P.No. 23-25
3. Rao M.S.A., (Ed.), 1974, Urban Sociology in India, P.No. 36.
4. ವೆಂಕಟರಘೋ ಕಟ್ಟಿ, (ಸಂ.), 1893, ಮುಂಬಯಿ ಗ್ಯಾಜೆಟಿಯರ್, ಪು.559
5. ವೆಂಕಟರಘೋ ಕಟ್ಟಿ, (ಸಂ.), 1893, ಮುಂಬಯಿ ಗ್ಯಾಜೆಟಿಯರ್, ಪು.560
6. ವೆಂಕಟರಘೋ ಕಟ್ಟಿ, (ಸಂ.), 1893, ಮುಂಬಯಿ ಗ್ಯಾಜೆಟಿಯರ್, ಪು.564
7. ನಾಯಕ. ವಿ ಎನ್., 2010, ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶ ಮತ್ತು ಪರಿಸರ, ಕಾರವಾರ, ಪು.7
8. ವೆಂಕಟರಘೋ ಕಟ್ಟಿ, (ಸಂ.), 1893, ಮುಂಬಯಿ ಗ್ಯಾಜೆಟಿಯರ್, ಪು.571
9. ವೆಂಕಟರಘೋ ಕಟ್ಟಿ, (ಸಂ.), 1893, ಮುಂಬಯಿ ಗ್ಯಾಜೆಟಿಯರ್, ಪು.572
10. ವೆಂಕಟರಘೋ ಕಟ್ಟಿ, (ಸಂ.), 1893, ಮುಂಬಯಿ ಗ್ಯಾಜೆಟಿಯರ್, ಪು.573
11. ವೆಂಕಟರಘೋ ಕಟ್ಟಿ, (ಸಂ.), 1893, ಮುಂಬಯಿ ಗ್ಯಾಜೆಟಿಯರ್, ಪು.574 75